ಶ್ರೀ ಎಂ ಪಿ ಪ್ರಕಾಶ್ ಅಧ್ಯಕ್ಷರೇ, ಈ ಕ್ಷೇತ್ರವು ಬಹಳ ಪವಿತ್ರವಾಗಿರುವಂತಹ ದೇವಸ್ಥಾನಗಳು ಮತ್ತು ಪುಣ್ಯ ಕ್ಷೇತ್ರಗಳನ್ನು ಹೊಂದಿದೆ ಎನ್ನುವುದರ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ ಮಾನ್ಯ ಶಾಸಕಿಯವರು ಈ ರಸ್ತೆಗಳನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ ಖಂಡಿತವಾಗಿಯೂ ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಇಲ್ಲಿಯವರೆಗೆ ಕೂಡ Indian Roads are as bad as their Politicians' ಅಂತ ಒಂದು ಮಾತು ಇತ್ತು ಇದು ಭಾರತದ ರಾಜಕಾರಣಿಗಳಷ್ಟೇ ಭಾರತ ದೇಶದ ರಸ್ತೆಗಳು ಕೆಟ್ಟಿವೆ ಎಂದು ಹಿಂದೆಲ್ಲಾ ಹೇಳುತ್ತಿದ್ದರು ಆದರೆ ಈಗ ಆ ರೀತಿ ಆಗುತ್ತಿಲ್ಲ We are now better Really Indian Politicians are much better than the other politicians of the rest ಈ ಕಾರಣಕ್ಕಾಗಿ ತಾವು ಹೇಳಿದ ವಿಚಾರದ ಬಗ್ಗೆ ಖಂಡಿತವಾಗಿಯೂ ಗಮನಕೊಟ್ಟು ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) ಮಾನ್ಯ ಅಧ್ಯಕ್ಷರೇ, ಈ ಎರಡೂ ಸೇತುವೆಗಳು ಬಹಳ ಪ್ರಮುಖವಾದಂಥ ಸೇತುವೆಗಳು ಒಂದು ಕಾವೇರಿ ಮತ್ತು ಇನ್ನೊಂದು ಕಪಿಲಾ ಸೇತುವೆ ಇವುಗಳು ಯಾವುದೋ ಬ್ರಿಟೀಷರ ಕಾಲದ್ದಾಗಿದ್ದು ಇವುಗಳ ರಿಪೇರಿ ಆಗಬೇಕೆಂದು ಒಂದೇಸಮನೆ ನಿರಂತರವಾಗಿ ಒತ್ತಾಯ ಇದೆ ತಾವು ಒಂದೇ ಮಾತಿನಲ್ಲಿ ಇದನ್ನು ಹೇಳಿಬಿಟ್ಟರೆ ಆಗುವುದಿಲ್ಲ, ಸ್ಪಷ್ಟವಾಗಿ ನಿರ್ಧಾರವಾಗಿ ಹೇಳಿ ಈ ಎರಡೂ ಸೇತುವೆಗಳು ಇವತ್ತು ಮುರಿದುಬೀಳುವ ಹಾಗಿವೆ ನಾನು ಮಾನ್ಯ ಶಾಸಕಿಯವರ ಬೇಡಿಕೆಗೆ ಬೆಂಬಲ ಸೂಚಿಸುತ್ತೇನೆ ಇವುಗಳು ನೂರಾರು ವರ್ಷಗಳ ಹಳೆಯಕಾಲದ ಸೇತುವೆಗಳು ಇವುಗಳ ದುರಸ್ಥಿ ಕಾರ್ಯ ಮಾಡಬೇಕೆಂದು ಸರ್ಕಾರಕ್ಕೆ ಅನೇಕ ಮನವಿಗಳು ಬಂದಿವೆ ಈ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ಎಂಬುದನ್ನು ದಯವಿಟ್ಟು ತಿಳಿಸಬೇಕು

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೇ, ಈ ಸೇತುವೆಗಳ ನಿರ್ಮಾಣಕ್ಕೇ ಒಂದು ಪ್ರತ್ಯೇಕವಾದಂಥ ನಿಗಮ ಇದೆ ಎಂಬುದು ತಮಗೆ ಗೊತ್ತಿದೆ ಮಾನ್ಯ ಶಾಸಕಿಯವರು ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಮತ್ತು ಮಾನ್ಯ ಶಾಸಕರೂ ಕೂಡ ಪ್ರಸ್ತಾಪ ಮಾಡಿದ್ದಾರೆ ಅದನ್ನು ಈ ವರ್ಷದಲ್ಲಿ ಸೇರಿಸಿಕೊಳ್ಳತಕ್ಕಂಥಾದ್ದಕ್ಕೆ ತಾವು ಮನವಿಯನ್ನು ಕೊಟ್ಟಾಗ ನಾನು ಲೋಕೋಪಯೋಗಿ ಮಂತ್ರಿಗಳ ಜತೆಗೆ ಮಾತನಾಡಿ ಅದನ್ನು ಸೇರಿಸುವಂತಹ ಎಲ್ಲಾ ಪ್ರಯತ್ನವನ್ನೂ ಮಾಡುತ್ತೇನೆ

ವಿಷಯ (ಛ) ಪಶ್ಚಿಮ ಘಟ್ಟದಲ್ಲಿ ಗಾಂಜಾ ಬೆಳೆಯುತ್ತಿರುವ ಬಗ್ಗೆ

ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) ಮಾನ್ಯ ಅಧ್ಯಕ್ಷರೇ, ಪುತ್ತೂರು ಕ್ಷೇತ್ರ ಪಶ್ಚಿಮ ಘಟ್ಟದ ಬುಡದಿಂದ ಪ್ರಾರಂಭವಾಗುತ್ತದೆ ಬಹಳಷ್ಟು ಔಷಧೀಯ ಗುಣಗಳಿರುವಂತಹ ಮರಗಳನ್ನು ಹೊಂದಿದ ಆ ಪಶ್ಚಿಮ ಘಟ್ಟದ ಒಳಗಡೆ ಅಂದರೆ ಸಾಧಾರಣ ಶಿರಾಡಿ, ಗುಂಡ್ಯ ಹಾಗೂ ಬೆಳ್ತಂಗಡಿ ತಾಲ್ಲೂಕಿನ ಶಿಶಿಲ, ಶಿವಾಜೆ ಆ ಘಾಟಿ ಬದಿಯಲ್ಲಿ ಹೊರಗಡೆಯೆಲ್ಲಾ ಮರಗಳನ್ನು ಕಾಣುತ್ತಿದ್ದೇವೆ ಆದರೆ ಒಳಗಡೆಯೆಲ್ಲಾ ಮರಗಳನ್ನು ಕಡಿದು ಕಳೆದ ಮೂರು-ನಾಲ್ಕು ವರ್ಷಗಳಿಂದ ಪರರಾಜ್ಯದ ಜನರು ಬಂದು ಅಲ್ಲಿ ಗಾಂಜಾವನ್ನು ಬೆಳೆಸುತ್ತಿದ್ದಾರೆ ಅದನ್ನು ತಡೆಯುವಂತಹ ಕೆಲಸವನ್ನು ಈ ತನಕ ಯಾವುದೇ ಸರ್ಕಾರ ಮಾಡಿಲ್ಲ ಎನ್ನಿಸುತ್ತದೆ ಇನ್ನಾದರೂ ಇದನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಇನ್ನೊಂದು ಸುಳ್ಯ ಕ್ಷೇತ್ರದಲ್ಲಿ ಪ್ರಸಿದ್ಧ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಇದೆ ಅಲ್ಲಿಂದ ನನ್ನ ಪುತ್ತೂರು ಕ್ಷೇತ್ರದ ಮುಖಾಂತರ ಬೆಳ್ತಂಗಡಿ ಕ್ಷೇತ್ರದಲ್ಲಿ ಇರುವುದು

ಶ್ರೀ ಧರ್ಮಸ್ಥಳ ಕ್ಷೇತ್ರ ಇವುಗಳ ಮಧ್ಯದಲ್ಲಿ ಒಂದು ಸೇತುವೆ ಆಗಬೇಕಾಗಿದೆ ಆ ರಸ್ತೆ ಏನು ಚೆನ್ನಾಗಿಲ್ಲ ಆದ್ದರಿಂದ ರಸ್ತೆಯ ವ್ಯವಸ್ಥೆ ಸರಿಯಾಗಬೇಕಾಗಿದೆ ಇನ್ನೊಂದು ವಿಷಯ ಎಂದರೆ, ಈ ತಿಂಗಳ ಪ್ರಾರಂಭದಲ್ಲಿ ಆನೆಕಾಲು ರೋಗಕ್ಕೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರೆಗಳನ್ನು ಹಂಚಿದರು ನಮ್ಮಲ್ಲಿ ಕೊಣಾಲು ಶಾಲೆಯ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದ ಹರೀಶ್ ಎಂಬ ಪರಿಶಿಷ್ಟ ಜಾತಿಗೆ ಸೇರಿದ ಹುಡುಗ ಆ ಮಾತ್ರೆಯನ್ನು ತಿಂದು ಅಸೌಖ್ಯಗೊಂಡು ತೀರಿಕೊಂಡಿದ್ದಾನೆ ಆ ಮನೆಯವರಿಗೆ ಸಾಂತ್ವನದ ಜತೆಗೆ ಅವರಿಗೆ ಪರಿಹಾರವಾಗಿ ಒಂದು ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಒದಗಿಸಿಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ

ವಿಷಯ (ಮ) ಸಕಲೇಶಪುರ ಕ್ಷೇತ್ರದಲ್ಲಿ ಗುಂಡ್ಯ ಮತ್ತು ಬಿಸ್ಲೆ ಅರಣ್ಯ ಸಿಬ್ಬಂದಿಗೆ ವಾಹನ ಇತ್ಯಾದಿ ಸೌಲಭ್ಯ ಒದಗಿಸುವ ಬಗ್ಗೆ

ಶ್ರೀ ಹೆಚ್ ಎಂ ವಿಶ್ವನಾಥ್ (ಸಕಲೇಶಪುರ) ಮಾನ್ಯ ಅಧ್ಯಕ್ಷರೇ, ಇದಕ್ಕೇ ಪೂರಕವಾಗಿ ಇನ್ನೊಂದು ಪ್ರಶ್ನೆ ಮಾನ್ಯ ಸದಸ್ಯೆಯವರು ಏನು ಪ್ರಸ್ತಾಪ ಮಾಡಿದರು, ಅದರ ಮಗ್ಗುಲಲ್ಲಿ ನನ್ನ ಸಕಲೇಶಪುರ ಕ್ಷೇತ್ರ ಇದೆ ಬಿಸ್ಲೆ ಅರಣ್ಯ ಮತ್ತು ಆ ಭಾಗದಲ್ಲಿ ಬರತಕ್ಕಂಥ ಏನು ಗುಂಡ್ಯ ಅರಣ್ಯ ಬರುತ್ತದೆ, ಅದರ ಒಳಗಡೆ ಭಾರಿ ದೊಡ್ಡ ಪ್ರಮಾಣದಲ್ಲಿ ಗಾಂಜಾವನ್ನು ಬೆಳೆಯುತ್ತಿದ್ದಾರೆ ಈ ಗಾಂಜಾ ಬೆಳೆಸುವುದು ಮತ್ತು ಅಲ್ಲಿ ಆಗತಕ್ಕಂಥ ಅನೈತಿಕೆ ಚಟುವಟಿಕೆಗಳನ್ನು ನಿಲ್ಲಿಸುವುದಕ್ಕೆ ನಮ್ಮ ಇಲಾಖೆ ಸಮರ್ಥವಾಗಿಲ್ಲ ಅದರ ಭಾಗದಲ್ಲಿ ಬರತಕ್ಕಂಥ ಎಸ್ಟನೂರು ರೇಂಜ್ ಅಂತ ಏನೊಂದು ಅರಣ್ಯ ಇಲಾಖೆಯ ರೇಂಜ್ ಇದೆ, ಅದಕ್ಕೆ ಅಗತ್ಯವಾದ ಸಿಬ್ಬಂದಿ ಇಲ್ಲ ಜತೆಗೆ ಅಲ್ಲಿ ಒಂದು ಜೀಪು ಕೂಡ ಇಲ್ಲ ಬಿಸ್ಲೆ ಮತ್ತು ಆ ಭಾಗದಲ್ಲಿ ಬರತಕ್ಕಂಥ ದೊಡ್ಡ ಅರಣ್ಯ ಇಡೀ ನಮ್ಮ ದೇಶದಲ್ಲೇ ಅತ್ಯುನ್ನತವಾದಂಥ ಅರಣ್ಯವಾಗಿದೆ ಅದನ್ನು ಸಂರಕ್ಷಣೆ ಮಾಡುವುದಕ್ಕೆ ಒಂದು ಇಲಾಖೆಗೆ ಜೀಪು ಇಲ್ಲ, ಮತ್ತು ಬೇಕಾದಂಥ ಸಿಬ್ಬಂದಿಯೂ ಇಲ್ಲವೆನ್ನುವ ಕಾರಣಕ್ಕೆ ಅಲ್ಲಿ ಗಾಂಜಾ ಬೆಳೆಯುವುದನ್ನು ತಪ್ಪಿಸಲು ಮತ್ತು ಅಲ್ಲಿರತಕ್ಕಂಥ ಅತ್ಯುನ್ನತವಾದಂಥ ಬೆತ್ತ ಮತ್ತು ಶ್ರೀಗಂಧ, ಶ್ರೀಹೊನ್ನೆ ಮರಗಳನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ ಆದ್ದರಿಂದ ಸರ್ಕಾರ ಕೂಡಲೇ ಅಲ್ಲಿಗೆ ಬೇಕಾದಂಥ ನಿಬ್ಬಂದಿ ಮತ್ತು ಅಗತ್ಯವಾದಂಥ ವಾಹನ ಸೌಕರ್ಯಗಳನ್ನು ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಹಾಗು ಸಂಸದೀಯ ವ್ಯವಹಾರಗಳ ಸಚಿವರು) ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರುಗಳಿಬ್ಬರೂ ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಮಾದಕ ವಸ್ತುಗಳ ನಿಬಂಧನೆಗಳಿಗೆ ಸಂಬಂಧಪಟ್ಟಿರತಕ್ಕಂಥ Narcotics Prevention Avt ಏನಿದೆ, ಅದಕ್ಕೆ ಸಂಬಂಧಪಟ್ಟ ಸಿಬ್ಬಂದಿ ಕೊರತೆ ಬಹಳ ಇದೆ ಗಾಂಜಾ ಬೆಳೆಯತಕ್ಕ ಪ್ರದೇಶಗಳನ್ನು ಗುರುತಿಸುವುದೂ ಕೂಡ ಬಹಳ ಕಷ್ಟ ಆಗುತ್ತಿದೆ ಆದರೂ ಕೂಡ ಆ ದಟ್ಟ ಅರಣ್ಯದ ಒಳಗಡೆಗೆ ಬೆಳೆಯತಕ್ಕಂಥ ಮಾದಕ ವಸ್ತುಗಳು, ಗಾಂಜಾ ಮೊದಲಾದುದನ್ನು ನಿಷೇಧಿಸುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿದೆ ಅದಕ್ಕೆ ತಾವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ ಸರ್ಕಾರ ಈ ಬಗ್ಗೆ ಗಮನವನ್ನು ಕೊಡುತ್ತದೆ ಈಗ ಭಾರತ ದೇಶ ಸುದೈವವಶಾತ್ it is only a peddler state ಎಂದು ಕರೆಯುತ್ತಾರೆ ಅಫ್ಘಾನಿಸ್ತಾನ ಮೊದಲಾದಂಥ ಅದರಲ್ಲಿ ಬರ್ಮಾ ಕಡೆಯಿಂದ ಇಂತಹ ಮಾದಕ ವಸ್ತುಗಳು ಬಹಳ ಬರುತ್ತವೆ ಈ ಮಾರ್ಗದಿಂದ ಬೇರೆ ಕಡೆಗೆ ಹೋಗುತ್ತವೆ ಇದು ಇನ್ನೂ ಕನ್ಸ್ಯೂಮರ್ ಸ್ಟೇಟ್ ಆಗಿಲ್ಲ ಬಳಸತಕ್ಕ ಉದ್ದೇಶ ಇನ್ನೂ ಆಗಿಲ್ಲ ಆದರೆ, ಅದನ್ನು ಬೆಳೆಯತಕ್ಕಂಥ